CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.798/2018

| | |
|---|---|
| ಸಾಕ್ಷಿದಾರರ ಹೆಸರು | ಪ್ರಸನ್ನ ಕುಮಾರ್ |
| ತಂದೆಯ ಹೆಸರು | ನರಸಿಂಹಯ್ಯ |
| ವಯಸ್ಸು | 36 ವರ್ಷ |
| ವೃತ್ತಿ | ಕೂಲಿ |
| ವಿಳಾಸ | ಅರಳಾಳುಸಂದ್ರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 19.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಚಾಸಾ-2 ರಿಂದ 27 ರವರ ಪೈಕಿ ಚಾಸಾ-20 ರವರ ಪರಿಚಯ ಇರುತ್ತದೆ.

2017 ರಲ್ಲಿ ನಾನು ತೊಪ್ಪಗಾನಹಳ್ಳಿ ಪೆಟ್ರೋಲ್ ಬಂಕಿನ ಬಳಿ ಇದ್ದಾಗ ಸಂಜೆ ಸುಮಾರು 6.30 ಗಂಟೆ ಸಮಯದಲ್ಲಿ ಬೆಂಗಳೂರಿನಿಂದ ಆರೋಪಿಯ ಗಾಡಿಯಾದ ಟೆಂಪೋ ವೇಗವಾಗಿ ಬರುತ್ತಿತ್ತು. ಮತ್ತೊಂದು ಬದಿ ಅಂದರೆ ಕನಕಪುರದ ಬೆಂಗಳೂರು ಕಡೆಗೆ ಸ್ವಿಫ್ಟ್ ಡಿಸೈರ್ ಕಾರ್ ಒಂದು ಬರುತ್ತಿತ್ತು. ಆಗ ಕತ್ತಲು ಇದ್ದ ಕಾರಣ ಬೆಳಕಿನ ವ್ಯತ್ಯಾಸವಾಗಿ ಸದರಿ ಸ್ವಿಫ್ಟ್ ಕಾರು ಆರೋಪಿಯ ಟೆಂಪೋ ಅಡಿಯಲ್ಲಿ ಸಿಲುಕಿರುತ್ತದೆ. ಸ್ಥಳದಲ್ಲಿ ಕಾರಿನಲ್ಲಿದ್ದ 4 ಜನ ತೀರಿಕೊಂಡಿರುತ್ತಾರೆ. ನಂತರ ಅವರುಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ಆಂಬ್ಯುಲೆನ್ಸನ್ನು ಕರೆಸಿರುತ್ತೇವೆ. ಸದರಿ ರಸ್ತೆ ಸಿಂಗಲ್ ರೋಡ್ ಆಗಿತ್ತು.

ಆರೋಪಿಯು ತನ್ನ ವಾಹನವನ್ನು ಸ್ವಲ್ಪ ನಿಧಾನವಾಗಿ ಚಲಾಯಿಸಿದ್ದರೆ ಸದರಿ ಅಪಘಾತವು ಆಗುತ್ತಿರಲಿಲ್ಲ.

ಈ ಸಂಬಂಧ ನಾನು ಸುಮಾರು 10.30 ಗಂಟೆ ಸಮಯದಲ್ಲಿ ದೂರನ್ನು ಕೊಟ್ಟಿರುತ್ತೇನೆ. ನಂತರ ಆಸ್ಪತ್ರೆಗೆ ಕರೆದೊಯ್ದದಾಗ ಇವರುಗಳು ಮೃತ ಹೊಂದಿರುವುದಾಗಿ ತಿಳಿಸಿದ್ದು ಅವರ ಸಂಬಂಧಿಕರಿಗೆ ಕರೆ ಮಾಡುವ ಪ್ರಯತ್ನ ಮಾಡಿರುತ್ತೇವೆ. ಪೋಲೀಸರು ನನ್ನನ್ನು ಸ್ಥಳಕ್ಕೆ ಕರೆದು ಮಹಜರ್ ಮಾಡಿರುತ್ತಾರೆ. ಬೆಳಿಗ್ಗೆ 9.30 ರಿಂದ ಸುಮಾರು 11.30 ಗಂಟೆಯವರೆಗೂ ಮಹಜರ್ ಮಾಡಿರುತ್ತಾರೆ. ನನ್ನ ಜೊತೆ ಇಬ್ಬರು ಗ್ರಾಮಸ್ಥರು ಸಹ ಇದ್ದು ಅವರ ಹೆಸರುಗಳು ನನಗೆ ಗೊತ್ತಿಲ್ಲ.

ಸದರಿ ಅಪಘಾತದ ಸ್ಥಳದಲ್ಲಿ ಅಪಘಾತದಲ್ಲಿ ತೀರಿಕೊಂಡ ಒಬ್ಬ ವ್ಯಕ್ತಿಯ ವಿವರ ಗೊತ್ತಾಗಿರುವುದಿಲ್ಲ ಹಾಗೂ ಸ್ಥಳದಲ್ಲಿ ಬಟ್ಟೆ, ಪ್ಯಾಂಟು, ಚಪ್ಪಲಿ ಇತ್ಯಾದಿಗಳು ಇದ್ದು ಅವುಗಳನು ಪೋಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ.

ಸಾಕ್ಷಿಗೆ ಸದರಿ ಪ್ರಕರಣದ ದೂರನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪ್ರಕರಣದಲ್ಲಿ ಹಾಜರು ಪಡಿಸಿರುವ 20 ಪೊಟೋಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಈಗ ನಿಪಿ-3 ರಿಂದ ನಿಪಿ-21 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ಸದರಿ ಅಪಘಾತವೂ ದಿಃ11.07.2017 ರಲ್ಲಿ ಆಗಿರುತ್ತದೆಂದರೆ ಸರಿ. ನಾನು ಆ ಸಂದರ್ಭದಲ್ಲಿ ಸದರಿ ಸ್ಥಳದ ಪೆಟ್ರೋಲ್ ಬಂಕ್ ನಲ್ಲಿ ನನ್ನ ವಾಹನಕ್ಕೆ ಪೆಟ್ರೋಲ್ ಹಾಕಿಸುತ್ತಿದ್ದೆ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಸದರಿ ಆರೋಪಿಯು ತನ್ನ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಕಾರಿಗೆ ಡಿಕ್ಕಿ ಹೊಡೆಸಿ ಅಪಘಾತ ಪಡಿಸಿರುತ್ತಾರೆಂದು ಹೇಳಿರುತ್ತೇನೆಂದರೆ ಸರಿ. ಸದರಿ ಕಾರಿನ ಸಂಖ್ಯೆ ಕೆಎ-01-ಎ ಎಫ್-7190 ಎಂದರೆ ಸರಿ. ಆರೋಪಿಯ ಕ್ಯಾಂಟರ್ ನಂ. ಟಿ ಎನ್-66ಸಿ 4487 ಎಂದರೆ ಸರಿ. ಸದರಿ ಸ್ವಿಫ್ಟ್ ಕಾರಿನಲ್ಲಿ ಒಬ್ಬ ಚಾಲಕ ಹಾಗೂ 4 ಜನ ಸವಾರರು ಇದ್ದರು ಎಂದರೆ ಸರಿ. ಅಪಘಾತದಲ್ಲಿ ಸದರಿ 5 ಜನ ಸ್ಥಳದಲ್ಲಿ ಮೃತಪಟ್ಟಿರುವುದಾಗಿ ಹೇಳಿರುತ್ತೇನೆಂದರೆ ಸರಿ. ಅಪಘಾತದಲ್ಲಿ ಆರೋಪಿಗೂ ಸಹ ಚಿಕ್ಕಪುಟ್ಟ ಗಾಯಗಳು ಆಗಿರುತ್ತದೆಂದರೆ ಸರಿ.

ಸದರಿ ದೂರಿನಲ್ಲಿ ನಾನು 4 ಜನರ ಹೆಸರನ್ನು ಹೇಳಿ ಇನ್ನೊಬ್ಬನ ಹೆಸರು ತಿಳಿದಿರುವುದಿಲ್ಲ ಎಂದು ಹೇಳಿರುತ್ತೇನೆಂದರೆ ಸರಿ. ನಾನು ದೂರನ್ನು ಅದೇ ದಿನ ರಾತ್ರಿ 10 ಗಂಟೆಗೆ ನೀಡಿರುತ್ತೇನೆಂದರೆ ಸರಿ. ಮರುದಿನ ಬೆಳಿಗ್ಗೆ ಪೋಲೀಸರು ಸ್ಥಳಕ್ಕೆ ಬಂದು ಬೆಳಿಗ್ಗೆ 9 ಗಂಟಯಿಂದ 10.30 ಗಂಟೆಯವರೆಗೂ ಮಹಜರ್ ಮಾಡಿರುತ್ತಾರೆಂದರೆ ಸರಿ. ಸದರಿ ಮಹಜರ್ ಗೆ ಚಾಸಾ-3 ಮತ್ತು 4 ರವರು ಸಹಿ ಮಾಡಿರುತ್ತಾರೆಂದರೆ ಸರಿ. ನಾನು ನನ್ನ ದೂರಿನಲ್ಲಿ ಸಿಮೆಂಟ್ ಕಲರ್ ಜೀನ್ಸ ಪ್ಯಾಂಟ್, ಕಪ್ಪು ಹಾಗೂ ಕಾಫಿ ಕಲರ್ ಮಿಶ್ರಿತ ತುಂಬು ತೋಳಿನ ಶರ್ಟ, ಕೆಂಪು ಕಲರ್ ನ ಬನಿಯನ್, ನೀಲಿ ಬಣ್ಣದ ಅಂಡರ್ ವೇರ್ ಸ್ಥಳದಲ್ಲಿ ಸಿಕ್ಕಿದ್ದು ಅದನ್ನು ಪೋಲೀಸರು ಅಮಾನತು ಪಡಿಸಿಕೊಂಡಿರುತ್ತಾರೆಂದರೆ ಸರಿ.

CW.1 PW.1

ಪಾಟೀ ಸವಾಲುಃ ಈ ಹಂತದಲ್ಲಿ ಆರೋಪಿಯು ತನ್ನ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನ್ಯಾಯದ ಹಿತದೃಷ್ಟಿಯಿಂದ ಒಂದು ಕಾಲವಕಾಶ ನೀಡಲಾಯಿತು.

ಓ ಹೇ ಕೇ ಸರಿ ಇದೆ

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

ಕನಕಪುರ .